ಹಿರೇಕೆರೂರು ತಾಲ್ಲೂಕಿನಲ್ಲಿ ಗ್ರಾಮೀಣ ಸಾರಿಗೆ ಬಸ್ಸುಗಳನ್ನು ಒದಗಿಸುವುದು

880 (1015) ಶ್ರೀ ಬನ್ನಿಕೋಡ್ . ಬಿ. ಹೆಚ್. (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆ ಹಿರೇ ಕೆರೂರು ತಾಲ್ಲೂಕಿನಲ್ಲಿ ಗ್ರಾಮೀಣ ಸಾರಿಗೆ ಬಸ್ ವ್ಯವಸ್ಥೆ ತೃಪ್ತಿಕರವಾಗಿಲ್ಲದ್ದರಿಂದ ಗ್ರಾಮೀಣ ಜನರ ಸಮಸ್ಯೆಗೆ ಪರಿಹಾರ ಒದಗಿಸಲು ಹತ್ತು ಬಸ್ಸುಗಳಿಗೆ ಮಾನ್ಯ ಸಚಿವರು ಅನುಮೋದನೆ ನೀಡಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಗ್ರಾಮೀಣ ಜನರಿಗೆ ಅವಶ್ಯವಿರುವಂತೆ ಇನ್ನೂ 9 ವಾಹಗಳನ್ನು ಪೂರೈಸಿ ಸಾರಿಗೆ ಸಂಪರ್ಕ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿ ಗ್ರಾಮೀಣ ಪ್ರಯಾಣಿಕರ ಸಾರಿಗೆ ಸಂಸ್ಥೆಗಳಿಗೆ ಪರಿಹಾರ ಒದಗಿಸಲು ಇದುವರೆಗೆ ಒಟ್ಟು 8 ಹೊಸ ಬಸ್ಸುಗಳನ್ನು ಹಿರೇಕೆರೂರು ಘಟಕಕ್ಕೆ ಪೂರೈಸಲಾಗಿದೆ. ಹಾಗೂ ಸದ್ಯದಲ್ಲಿಯೇ ಇನ್ನೂ 3 ಬಸ್ಸುಗಳನ್ನು ಒದಗಿಸಿ ಗ್ರಾಮೀಣ ಸಾರಿಗೆ ವ್ಯವಸ್ಥೆ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಹೆಚ್ಚಿಗೆ 3 ವಾಹನಗಳನ್ನು ಪೂರೈಸಿ ಗ್ರಾಮೀಣ ಜನವರಿಗೆ ಸಾರಿಗೆ ಸೌಲಭ್ಯ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಚಿಂತಾಮಣಿ ನಗರದಲ್ಲಿ ಬಸ್ ನಿಲ್ದಾಣ ನಿರ್ಮಾಣ

883(836) ಶ್ರೀ ಚೌಡರೆಡ್ಡಿ(ಚಿಂತಾಮಣಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರದಲ್ಲಿ ಖಾಸಗಿ ಬಸ್ ನಿಲ್ದಾಣ, ಲಾರಿಗಳ ತಂಗುದಾಣ ಹಾಗೂ ವಾಹನಗಳ ರಿಪೇರಿ ಅಂಗಡಿಗಳಿಗೆ ಪ್ರತ್ಯೇಕ ಸ್ಥಳ ಸೂಚಿಸಲಾಗಿದೆಯೇ;

ಆ) ಈ ಬಗ್ಗೆ ಏನಾದರೂ ರೂಪು- ರೇಷಗಳು ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದೆಯೆ;

ಇ) ಅಂದಾಜು ಮಾಡಿದ್ದರೆ ತಾರೀಖು ಮತ್ತು ಮೊಬಲಗು ತಿಳಿಸುವರು;

ಈ) ಈಗ ಈಯೋಜನೆಯನ್ನು ಕೈಬಿಡ ಲಾಗಿದೆಯೇ?

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಹೌದು, ಬಸ್ ನಿಲ್ದಾಣ, ಟ್ರಕ್ ಟರ್ಮಿನಲ್ ಮತ್ತು ಪ್ಲಾಟ್‌ಫಾರಂ, ನಿರ್ಮಿಸಲು ಚೇಳೂರು ರಸ್ತೆಯಿಂದ ರಾಮಕುಂಟಿಯವರೆಗೆ ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಲಾರಿಗಳ ತಂಗುದಾಣ ಹಾಗೂ ವಾಹನಗಳ ರಿಪೇರಿ ಅಂಗಡಿಗಳಿಗಾಗಿ ರಾಮಕುಂಟೆ ಪ್ರದೇಶದಲ್ಲಿ ಪ್ರತ್ಯೇಕ ಸ್ಥಳ ಗುರುತಿಸಲಾಗಿದೆ.